ತೆಗೆದುಕೊಳ್ಳಲಾಗುತ್ತಿದ್ದು ಸದ್ಯಕ್ಕೆ ಸ್ಥಳೀಯ ಪ್ರಾಥಮಿಕ ಶಾಲೆಗಳಲ್ಲಿರುವ ಪದವೀಧರ ಉಪಾಧ್ಯಾಯರಿಂದ ಪಾಠಪ್ರವಚನಗಳನ್ನು ಮಾಡಿಸಲಾಗುತ್ತಿದೆ. ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಸದ್ಯಕ್ಕೆ ತಾತ್ಕಾಲಿಕ ನಿಯೋಜನೆಯ ಮೇರೆಗೆ ಸದ್ಯದಲ್ಲಿಯೇ ತುಂಬಲಾಗುವುದು.

ಇ) ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಮಾತ್ರ ನಿಯೋಜನೆ ಮಾಡಲಾಗುತ್ತಿದೆ. ಮೂಲ ಶಾಲೆಗಳಲ್ಲಿನ ಶಿಕ್ಷಕರಿಗೆ ಹೆಚ್ಚಿನ ಅವಧಿಯಲ್ಲಿ ಪಾಠಪ್ರವಚನ ನಡೆಸಲು ಸೂಚಿಸಲಾಗಿದೆ. ಶಿಕ್ಷಕರ ಕೊರತೆ ಇದ್ದರೂ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಈ) ಖಾಲಿ ಹುದ್ದೆಗಳಲ್ಲಿ ಶೇ. 40 ರಷ್ಟನ್ನು ಮಿತ ವೇತನ ಪದವೀಧರರಿಂದ ಭರ್ತಿ ಮಾಡಲು ವಿಭಾಗ ಮಟ್ಟದಲ್ಲಿ ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಬಾಕಿ ಉಳಿಯುವ ಎಲ್ಲಾ ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮತೆಗೆದುಕೊಳ್ಳಲಾಗುತ್ತಿದೆ. ತಿದ್ದುಪಡಿ ನಂತರ ಹುದ್ದೆಗಳನ್ನು ತುಂಬಲಾಗುವುದು.

ಉ) ಸದರಿ ಇಂಟರ್ ಕಮ್ಯುನಿಕೇಶನ್ ಸೌಂಡ್ ಬಾಕ್ಸ್‌ಗೆ ವೈರಿಂಗ್ ಆಗಿರುವುದಿಲ್ಲ. ರೀ ವೈರಿಂಗ್ ಮಾಡಿಲಸು ಹಾಗೂ ಈ ವಿದ್ಯುತ್ ಸಾಧನಕ್ಕೆ ಅಗತ್ಯವಿರುವ ವಿದ್ಯುಚಕ್ತಿ ಉಪಯೋಗಿಸಲು ಶಾಲೆಗೆ ನಿಗದಿಪಡಿಸಿರುವ ಸಾವಿರಾರು ಹಣ ಸಾಕಾಗುವುದಿಲ್ಲ. ಈ ಸಾದನಕ್ಕೆ ಆಗಾದ ಖರ್ಚು (ವಿದ್ಯುಚಕ್ತಿ ಬಿಲ್) ಬರುತ್ತದೆಯಾದ್ದರಿಂದ ವೈರಿಂಗ್ ಹಾಗು ವಿದ್ಯುತ್ ಬಿಲ್‌ನ ಖರ್ಚನ್ನು ಗುಲ್ಬರ್ಗಾ ವಿಭಾಗ ಸಹ ನಿರ್ದೇಶಕರ ಕಛೇರಿಯ ನಿಧಿಯಿಂದಲೇ ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಇದನ್ನು ಉಪಯೋಗಿಸಿ ಪೂರ್ತಿ ಪ್ರಯೋಜನವನ್ನು ಪಡೆಯಲಾಗಿದೆ.

ಸೇಡಂ ಬಸ್ ನಿಲ್ದಾಣದಲ್ಲಿಯ ಶೌಚಾಲಯ ಸರಿಪಡಿಸುವುದು

3430 - ಶ್ರೀ ಬಸಶಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿರುವ ಶೌಚಾಲಯ ಸರಿಪಡಿಸಲಾಗದ ಕಾರಣ ಮಹಿಳಾ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಇ) ಈಗಲಾದರೂ ವಿಳಂಬ ಮಾಡದೆ ಮಹಿಳಾ ಪ್ರಯಾಣಿಕರಿಗೆ ತೊಂದರೆಯಾಗದಂತೆ ಸೌಲಭ್ಯ ಒದಗಿಸಲಾಗುವುದೇ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಹೌದು.

ಆ) ಜರೂರು ರಿಪೇರಿ ಮಾಡಲು ಆದೇಶಿಸಲಾಗಿದೆ.

ಇ) ರಿಪೇರಿ ಮಾಡಿದ ನಂತರ ಸಮಸ್ಯೆ ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಆಂಧ್ರಗಡಿ ಪ್ರಾಂತ್ಯದಲ್ಲಿ ಪ್ರಾಥಮಿಕ ಶಾಲೆಗಳ ಮಂಜೂರಾತಿ

3429 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?